**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಟಿ. ಶ್ರೀಕಂಠೇಗೌಡ ಇವರು ನಿಯಮ 72 ರಡಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

**ಪ್ರಶ್ನೆ:**

ರಾಜೀವ್ ಗಾಂಧಿ ವಸತಿ ನಿಗಮದ ಮುಖಾಂತರ ಗ್ರಾಮ ಪಂಚಾಯಿತಿಗಳಿಗೆ ಹೊಸದಾಗಿ ಮನೆಗಳ ಗುರಿಯನ್ನು ನಿಗಧಿಪಡಿಸಿ, ಫಲಾನುಭವಿಗಳ ಆಯ್ಕೆಗೆ ಇತ್ತೀಚೆಗೆ ಹೊಸ ತಂತ್ರಾಂಶವನ್ನು ಅಭಿವೃದ್ಧಿಪಡಿಸಿದ್ದು, ಪ್ರಸ್ತುತ ಗ್ರಾಮ ಪಂಚಾಯಿತಿಗಳಲ್ಲಿ ವಸತಿ ರಹಿತರನ್ನು ಆಯ್ಕೆ ಮಾಡುವಾಗ ಹೊಸ ಪಡಿತರ ಚೀಟಿಯಲ್ಲಿನ ಹೆಸರು ವಸತಿ ನಿಗಮದ ಹೊಸ ತಂತ್ರಾಂಶದಲ್ಲಿ ಬಂದಿರುವುದರಿಂದ ವಸತಿ ರಹಿತ ಫಲಾನುಭವಿಗಳನ್ನು ಆಯ್ಕೆ ಮಾಡಲು ತೊಂದರೆಯಾಗುತ್ತಿರುವ ಬಗ್ಗೆ.

**ಉತ್ತರ :**

ಸರ್ಕಾರವು ವಸತಿ ರಹಿತರಿಗೆ ರಾಜೀವ್ ಗಾಂಧಿ ವಸತಿ ನಿಗಮದ ಮೂಲಕ ಕೆಳಕಂಡ ಯೋಜನೆಗಳನ್ನು ಅನುಷಾನಗೊಳಿಸುತ್ತಿದೆ.

**ರಾಜ್ಯ ಸರ್ಕಾರದ ಯೋಜನೆಗಳು:-**

- ಬಸವ ವಸತಿ ಯೋಜನೆ
- ಡಾ.ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆ (ಗ್ರಾಮೀಣ ಮತ್ತು ನಗರ)
- ದೇವರಾಜ್ ಅರಸು ವಸತಿ ಯೋಜನೆ (ಗ್ರಾಮೀಣ ಮತ್ತು ನಗರ)
- ವಾಜಪೇಯಿ ನಗರ ವಸತಿ ಯೋಜನೆ
- ಮುಖ್ಯಮಂತ್ರಿಗಳ ಒಂದು ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ.

**ಕೇಂದ್ರ ಪುರಸ್ಕೃತ ಯೋಜನೆಗಳು :-**

- ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾಮೀಣ ಮತ್ತು ನಗರ).

ಮೇಲೆ ತಿಳಿಸಿದ ವಸತಿ ಯೋಜನೆಗಳಡಿ ಕೆಳಕಂಡ ಲೋಪದೋಷಗಳನ್ನು ತಪ್ಪಿಸುವ ಸಲುವಾಗಿ ಸರ್ಕಾರವು ವಿವಿಧ ವಸತಿ ಯೋಜನೆಗಳಡಿ ಆನ್‌ಲೈನ್ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.

1. ನಕಲಿ ಫಲಾನುಭವಿಗಳನ್ನ ತಡೆಗಟ್ಟಲು
2. ಪುನರಾವರ್ತಿತ ಫಲಾನುಭವಿಗಳನ್ನ ತಡೆಗಟ್ಟಲು
3. ಬೇರೆ ವಸತಿ ಯೋಜನೆಗಳಡಿ ಸೌಲಭ್ಯ ಪಡೆದಿರುವವರು ಪುನಹ ಸೌಲಭ್ಯ ಪಡೆಯದಂತೆ ತಡೆಗಟ್ಟಲು.
4. ಒಂದೇ ಕುಟುಂಬದ ಸದಸ್ಯರುಗಳು ಯೋಜನೆಗಳಡಿ ಆಯ್ಕೆಯಾಗುವುದನ್ನು ತಪ್ಪಿಸಲು.

ಮೇಲೆ ತಿಳಿಸಿದಂತೆ ಯಾವುದೇ ಲೋಪದೋಷಗಳಿಗೆ ಅವಕಾಶ ಕೊಡದೇ ಸರ್ಕಾರವು ನಿಗದಿಪಡಿಸುವ ಗುರಿಗೆ ಎದುರಾಗಿ ಅರ್ಹ ಫಲಾನುಭವಿಗಳನ್ನು ಆಯ್ಕೆಗೊಳಿಸುವ ಸಲುವಾಗಿ ಹಾಗೂ ಸರ್ಕಾರವು ಇ-ಆಡಳಿತ ಇಲಾಖೆಯ ಮೂಲಕ ಹೊರಡಿಸಿರುವ ಸುತ್ತೋಲೆ ಸಂಖ್ಯೆ: ಸಿಆಸುಇ 126 ಇಜಿಎಂ 2020, ದಿನಾಂಕ :18.09.2020 ರಲ್ಲಿ ತಿಳಿಸಿರುವಂತೆ ಫಲಾನುಭವಿಗಳ ಅರ್ಹರಿರುವ ಬಗ್ಗೆ ಕುಟುಂಬ ದತ್ತಾಂಶದಲ್ಲಿ(Family Database) ಪರಿಶೀಲಿಸಿಕೊಂಡು ಫಲಾನುಭವಿಗಳ ಪಟ್ಟಿಗೆ ಅನುಮೋದನೆ ನೀಡಲಾಗುತ್ತಿದೆ.

ಅದರಂತೆ ಫಲಾನುಭವಿಗಳನ್ನು ಗ್ರಾಮ ಸಭೆ ಮುಖಾಂತರ ಆಯ್ಕೆಗೊಳಿಸಿದ ನಂತರ ಫಲಾನುಭವಿಗಳ ವಿವರಗಳಿಗೆ ಸಂಬಂಧಿಸಿದಂತೆ ಪ್ರಮುಖವಾಗಿ ಆಧಾರ್ ಸಂಖ್ಯೆ ವಿವರಗಳನ್ನು UIDAI Web Server ಮೂಲಕ, ಪಡಿತರ ಚೀಟಿ ಸಂಖ್ಯೆಯ ವಿವರಗಳನ್ನು ಇ-ಆಡಳಿತ ಇಲಾಖೆಯ Family Database Web Server ಮೂಲಕ ಹಾಗೂ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಸಂಖ್ಯೆಯ ವಿವರಗಳನ್ನು ಕಂದಾಯ ಇಲಾಖೆಯ Database ನ Web Server ಮೂಲಕ Real time Basis ನಲ್ಲಿ ಪರಿಶೀಲಿಸಿಕೊಂಡು ಸರಿಯಿದ್ದಲ್ಲಿ ಫಲಾನುಭವಿಗಳ ಇತರೆ ಮಾಹಿತಿಯಾದ ಗ್ರಾಮಸಭಾ ಠರಾವಿನ ಸಂಖ್ಯೆ ಹಾಗೂ ದಿನಾಂಕದ ವಿವರಗಳನ್ನು ಕೂಲಂಕುಷವಾಗಿ ತಪ್ಪಿಲ್ಲದೇ ನಿಗಮದ ತಂತ್ರಾಂಶದಲ್ಲಿ ನಮೂದಿಸಿ ನಂತರ ನಿಯಮಾನುಸಾರ ಫಲಾನುಭವಿಗಳ ಪಟ್ಟಿಗೆ ಅನುಮೋದನೆ ನೀಡಲಾಗುತ್ತಿದೆ.

ಗ್ರಾಮ ಪಂಚಾಯತಿಯಲ್ಲಿ ವಸತಿ ರಹಿತರನ್ನು ಆಯ್ಕೆ ಮಾಡುವಾಗ ಕೆಲವು ಫಲಾನುಭವಿಗಳು ಹೊಸದಾಗಿ ಪಡಿತರ ಚೀಟಿಯನ್ನ ಪಡೆದುಕೊಂಡಿದ್ದಲ್ಲಿ ಅಂತಹ ಪಡಿತರ ಚೀಟಿಯ ವಿವರಗಳು ಇ-ಆಡಳಿತ ಇಲಾಖೆಯ Family Database ನಲ್ಲಿ ಲಭ್ಯವಿಲ್ಲದೇ ಇರುವುದನ್ನು ನಿಗಮವು ಗಮನಿಸಿದ್ದು, ಈಗಾಗಲೇ ಸಂಬಂಧಪಟ್ಟ ಇಲಾಖೆಯೊಂದಿಗೆ ಚರ್ಚಿಸಿದ್ದು, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಿಂದ ಅಧಿಕೃತವಾಗಿ ನೀಡಲಾಗಿರುವ ಎಲ್ಲಾ ಪಡಿತರ ಚೀಟಿಯ ವಿವರಗಳನ್ನು Family Database ನೊಂದಿಗೆ Update ಮಾಡುವಂತೆ ಚರ್ಚಿಸಲಾಗಿದ್ದು, ಅದರಂತೆ ಇ-ಆಡಳಿತ ಇಲಾಖೆಯು ಕ್ರಮ ವಹಿಸುತ್ತಿದೆ.

ಆದಾಗ್ಯೂ, ಹೊಸ ಪಡಿತರ ಚೀಟಿಯಲ್ಲಿನ ಹೆಸರು ನಿಗಮದ ಆನ್‌ಲೈನ್‌ನಲ್ಲಿ ಬಾರದಿರುವ ಪ್ರಕರಣಗಳನ್ನು ಗ್ರಾಮ/ತಾಲ್ಲೂಕು/ಜಿಲ್ಲೆಗಳಿಂದ ಪಡೆದು, ಇ-ಆಡಳಿತ ಇಲಾಖೆಗೆ ಸಲ್ಲಿಸಿ, ತೊಂದರೆಯನ್ನು ನಿವಾರಿಸಿಕೊಂಡು ಹಾಗೂ ವಸತಿ ನಿಗಮದ ಹೊಸ ತಂತ್ರಾಂಶದಲ್ಲಿ ಹೊಸ ಪಡಿತರ ಚೀಟಿಯಲ್ಲಿನ ಹೆಸರು ಗೋಚರಿಸುವಂತೆ ಮಾಡಲಾಗಿದ್ದು, ವಸತಿ ರಹಿತ ಫಲಾನುಭವಿಗಳನ್ನು ಆಯ್ಕೆ ಮಾಡಲು ತೊಂದರೆಯಾಗುತ್ತಿರುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

(ಸಂಖ್ಯೆ: ವಇ 217 ಹೆಚ್‌ಎಎಂ 2022)

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು